# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗುಲ್ಬರ್ಗಾ ವಿಭಾಗಕ್ಕೆ ಹೊಸದಾಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಮಂಜೂರು ಮಾಡುವ ಬಗ್ಗೆ

***

**ಪ್ರಸ್ತಾವನೆ:-**

ರಾಜ್ಯ ಸರ್ಕಾರವು 1995-96ನೇ ಸಾಲಿನಿಂದ ಗ್ರಾಮೀಣ ಪ್ರದೇಶದ ಪ್ರತಿಭಾನ್ವಿತ ವಿದ್ಯಾರ್ಥಿನಿ/ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಇದುವರೆವಿಗೂ 385 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಮಂಜೂರು ಮಾಡಿ ಪ್ರಾರಂಭ ಮಾಡಲಾಗಿದೆ. ಅಂತಹ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು 4 ಇಲಾಖೆಗಳು ಅಂದರೆ, ಸಮಾಜ ಕಲ್ಯಾಣ ಇಲಾಖೆ (ಪರಿಶಿಷ್ಟ ಜಾತಿಯವರಿಗೆ), ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ (ಪರಿಶಿಷ್ಟ ವರ್ಗದವರಿಗೆ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ (ಹಿಂದುಳಿದ ವರ್ಗದವರಿಗೆ) ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ (ಅಲ್ಪಸಂಖ್ಯಾತರಿಗೆ) ಗಳು ಆಯಾ ವರ್ಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪ್ರಾರಂಭ ಮಾಡಲಾಗಿದೆ. ಈ ವಸತಿ ಶಾಲೆಗಳಲ್ಲಿ 6ನೇ ತರಗತಿಯಿಂದ 10ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ನೀಡಲಾಗುತ್ತಿದ್ದು, ಉಚಿತ ಊಟ, ವಸತಿ ಇತರ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಪ್ರತಿ ವರ್ಷಕ್ಕೆ ಪ್ರತಿ ಶಾಲೆಗೆ ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆ 50 ರಂತೆ ಇದ್ದು, ಒಟ್ಟು ವಿದ್ಯಾರ್ಥಿಗಳ ಗರಿಷ್ಟ ಸಂಖ್ಯೆ ಪ್ರತಿ ಶಾಲೆಗೆ 250 ಆಗಿರುತ್ತದೆ. ಈ ಒಟ್ಟು ಸಂಖ್ಯೆಯಲ್ಲಿ ಶೇ.50ರಷ್ಟು ಸೀಟುಗಳನ್ನು ಹೆಣ್ಣುಮಕ್ಕಳಿಗೆ ಕಾಯ್ದಿರಿಸಲಾಗಿದ್ದು 2009-10ನೇ ಸಾಲಿನಲ್ಲಿ 76610 ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ವ್ಯಾಸಂಗ ಮಾಡಲು ಅವಕಾಶವಿದೆ.

ಈ ರೀತಿ ಪ್ರಾರಂಭ ಮಾಡಿದ ವಸತಿ ಶಾಲೆಗಳನ್ನು ಆಯಾ ಸಂಬಂಧಪಟ್ಟ ಇಲಾಖೆಗಳು ಅವರ ಅನುದಾನದಲ್ಲಿ ನಿರ್ವಹಣೆ ಮಾಡುತ್ತಿವೆ. ಈ ವಸತಿ ಶಾಲೆಗಳನ್ನು ಪ್ರಾರಂಭದಿಂದ 2005 ರವರೆಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ನಿರ್ವಹಣೆ ಮಾಡುತ್ತಿತ್ತು. ತದನಂತರ ಸಂವಿಧಾನದ ಅನುಚ್ಛೇದ(73)ನೇ ತಿದ್ದುಪಡಿಯಂತೆ ತಾ.1.04.2005 ರಿಂದ ಜಿಲ್ಲಾ ಪಂಚಾಯತ್‌ಗಳಿಗೆ ನಿರ್ವಹಣೆಗಾಗಿ ವರ್ಗಾವಣೆ ಮಾಡಲಾಗಿದೆ. ಈ ವಸತಿ ಶಾಲೆಗಳಿಗೆ ಜಿಲ್ಲಾ ವಲಯದಿಂದ ಅನುದಾನ ಬಿಡುಗಡೆ ಆಗುತ್ತಿದ್ದು, ಜಿಲ್ಲಾ ಪಂಚಾಯತ್‌ಗಳು ನಿರ್ವಹಣೆ ಮಾಡುತ್ತಿವೆ. ಆದರೂ ಸಹ ಹೊಸದಾಗಿ ಮಂಜೂರಾದ ಮೊರಾರ್ಜಿ ದೇಸಾಯಿ ವಸತಿಶಾಲೆಗಳನ್ನು ಪ್ರಾರಂಭದ ಮೊದಲ ವರ್ಷದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ನಿರ್ವಹಣೆ ಮಾಡಿ 2ನೇ ವರ್ಷದಿಂದ ಆಯಾಯ ಜಿಲ್ಲಾ ಪಂಚಾಯತ್‌ಗಳಿಗೆ ನಿರ್ವಹಣೆಗಾಗಿ ವರ್ಗಾವಣೆ ಮಾಡಲಾಗುತ್ತಿದೆ.

ಗುಲ್ಬರ್ಗಾ ಕಂದಾಯ ವಿಭಾಗದ ವ್ಯಾಪ್ತಿಗೆ ಬರುವ 5 ಜಿಲ್ಲೆಗಳಲ್ಲಿ ಒಟ್ಟು 87 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಮತ್ತು 28 ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಗಳಿದ್ದು ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ / ಹಿಂದುಳಿದ ವರ್ಗಗಳ ವಿದ್ಯಾರ್ಥಿ / ವಿದ್ಯಾರ್ಥಿನಿಯರಿಗೆ ಇನ್ನೂ ಹೆಚ್ಚಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸುವ ಅವಶ್ಯಕತೆ ಇರುತ್ತದೆ.

ಆ ಹಿನ್ನೆಲೆಯಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಕಇ 110 ಎಂಡಿಎಸ್ 2009, ಬೆಂಗಳೂರು, ದಿನಾಂಕ: 07-09-2009**

ಗುಲ್ಬರ್ಗಾ ವಿಭಾಗದಲ್ಲಿ 2010-11 ನೇ ಸಾಲಿನಲ್ಲಿ ಒಟ್ಟು 14 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು(ಪರಿಶಿಷ್ಟ ಜಾತಿ 7, ಪರಿಶಿಷ್ಟ ಪಂಗಡ 1, ಹಿಂದುಳಿದ ವರ್ಗಗಳ 6) ಈ ಕೆಳಗಿನಂತೆ ಹೊಸದಾಗಿ ಪ್ರಾರಂಭಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

| ಕ್ರ ಸಂ | ಪ್ರವರ್ಗ | ವಿಧಾನಸಭಾ ಕ್ಷೇತ್ರದ ಹೆಸರು | ಜಿಲ್ಲೆ |
|---|---|---|---|
| 1 | ಹಿಂದುಳಿದ ವರ್ಗ | ಯಾದಗಿರಿ | ಗುಲ್ಬರ್ಗ |
| 2 | ಪರಿಶಿಷ್ಟ ಜಾತಿ | ಸೇಡಂ | ಗುಲ್ಬರ್ಗ |
| 3 | ಪರಿಶಿಷ್ಟ ಜಾತಿ | ಆಳಂದ | ಗುಲ್ಬರ್ಗ |

| | | | |
|---|---|---|---|
| 4 | ಪರಿಶಿಷ್ಟ ಜಾತಿ | ಗುಲ್ಬರ್ಗ ಉತ್ತರ | ಗುಲ್ಬರ್ಗ |
| 5 | ಹಿಂದುಳಿದ ವರ್ಗ | ಹಗರಿಬೊಮ್ಮನಹಳ್ಳಿ | ಬಳ್ಳಾರಿ |
| 6 | ಹಿಂದುಳಿದ ವರ್ಗ | ವಿಜಯನಗರ | ಬಳ್ಳಾರಿ |
| 7 | ಪರಿಶಿಷ್ಟ ವರ್ಗ | ಕಂಪ್ಲಿ | ಬಳ್ಳಾರಿ |
| 8 | ಪರಿಶಿಷ್ಟ ಜಾತಿ | ಸಿರಗುಪ್ಪ | ಬಳ್ಳಾರಿ |
| 9 | ಹಿಂದುಳಿ ವರ್ಗ | ಔರಾದ್ | ಬೀದರ್ |
| 10 | ಹಿಂದುಳಿಧ ವರ್ಗ | ಹುಮನಬಾದ್ | ಬೀದರ್ |
| 11 | ಹಿಂದುಳಿದ ವರ್ಗ | ಭಾಲ್ಕಿ | ಬೀದರ್ |
| 12 | ಪರಿಶಿಷ್ಟ ಜಾತಿ | ಸಿಂಧನೂರು | ರಾಯಚೂರು |
| 13 | ಪರಿಶಿಷ್ಟ ಜಾತಿ | ಮಸ್ಕಿ | ರಾಯಚೂರು |
| 14 | ಪರಿಶಿಷ್ಟ ಜಾತಿ | ಗಂಗಾವತಿ | ಕೊಪ್ಪಳ |

ಅಂತಹ ಪ್ರತಿ ವಸತಿ ಶಾಲೆಗೆ ನಿಗದಿತ ಸಿಬ್ಬಂದಿ ಮಾದರಿ (staffing pattern) ಪ್ರಕಾರ ಈ ಕೆಳಗಿನಂತೆ ಹುದ್ದೆಗಳನ್ನು ಸೃಜಿಸಲು ಆದೇಶಿಸಲಾಗಿದೆ:-

| ಕ್ರಮ ಸಂಖ್ಯೆ | ಹುದ್ದೆಯ ಪದನಾಮ | ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ |
|---|---|---|---|
| **ಬೋಧಕ ಹುದ್ದೆಗಳು** | | | |
| 1 | ಪ್ರಾಂಶುಪಾಲರು | 11400-21600 | 01 |
| 2 | ಕನ್ನಡ ಶಿಕ್ಷಕರು | 8825-16000 | 01 |
| 3 | ಆಂಗ್ಲ ಶಿಕ್ಷಕರು | 8825-16000 | 01 |
| 4 | ಹಿಂದಿ/ಉರ್ದು ಶಿಕ್ಷಕರು | 8825-16000 | 01 |
| 5 | ಗಣಿತ ಶಿಕ್ಷಕರು | 8825-16000 | 01 |
| 6 | ವಿಜ್ಞಾನ ಶಿಕ್ಷಕರು | 8825-16000 | 01 |
| 7 | ಸಮಾಜಶಾಸ್ತ್ರ ಶಿಕ್ಷಕರು | 8825-16000 | 01 |
| 8 | ದೈಹಿಕ ಶಿಕ್ಷಣ ಶಿಕ್ಷಕರು | 8825-16000 | 01 |
| 9 | ಗಣಕಯಂತ್ರ ಶಿಕ್ಷಕರು | 8825-16000 | 01 |
| 10 | ಕ್ರಾಫ್ಟ್ ಶಿಕ್ಷಕರು | 8000-14800 | 01 |
| 11 | ಸಂಗೀತ ಶಿಕ್ಷಕರು | 8000-14800 | 01 |
| **ಬೋಧಕೇತರ ಹುದ್ದೆಗಳು** | | | |
| 1 | ಮಹಿಳಾ ಶುಶ್ರೂಷಕಿ | 8000-14800 | 01 |
| 2 | ನಿಲಯ ಪಾಲಕರು | 7275-13350 | 01 |
| 3 | ಪ್ರಥಮ ದರ್ಜೆ ಸಹಾಯಕರು | 7275-13350 | 01 |
| 4 | ಅಡುಗೆಯವರು | 5200-8200 | 02 |
| 5 | ಅಡುಗೆ ಸಹಾಯಕರು | 4800-7275 | 03 |
| 6 | ಗ್ರೂಪ್ ಡಿ ನೌಕರರು | 4800-7275 | 01 |
| 7 | ಕಾವಲುಗಾರರು | 4800-7275 | 02 |
| 8 | ಸ್ವಚ್ಛತಾ ಸಿಬ್ಬಂದಿ | 4800-7275 | 03 |
| ಒಟ್ಟು | | | 25 |

76

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ವೆಚ್ಚವನ್ನು ಕ್ರಮವಾಗಿ ಲೆಕ್ಕಶೀರ್ಷಿಕೆ 2225-01-277-0-62(ಯೋಜನೆ), ಲೆಕ್ಕಶೀರ್ಷಿಕೆ 2225-02-277-0-34(ಯೋಜನೆ) ಹಾಗೂ ಲೆಕ್ಕಶೀರ್ಷಿಕೆ 2225-03-277-2-62 (ಯೋಜನೆ) ರ ಅಡಿ ಭರಿಸತಕ್ಕದ್ದು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ,

(ಅಶೋಕ್ ಕುಮಾರ್.ಜೆ)
ಸರ್ಕಾರದ ಅಧೀನ ಕಾರ್ಯದಶಿ-1(ಪ್ರ)
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:-

1. ಮಹಾಲೇಖಪಾಲರು (ಎ & ಇ, ಲೆಕ್ಕಪರಿಶೋಧನೆ-1, ಲೆಕ್ಕಪರಿಶೋಧನೆ-2), ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
3. ನಿರ್ದೇಶಕರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು
4. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು
5. ಜಿಲ್ಲಾಧಿಕಾರಿಗಳು, ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ಕೊಪ್ಪಳ
6. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
7. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ಕೊಪ್ಪಳ,
8. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ) (ಸಿ.428/2009) ವಿಧಾನಸೌಧ
9. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ 3, 9), ಆರ್ಥಿಕ ಇಲಾಖೆ ವಿಧಾನಸೌಧ
10. ಸರ್ಕಾರದ ಅಧೀನ ಕಾರ್ಯದರ್ಶಿ (2 : 3), ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ
11. ಶಾಖಾ ರಕ್ಷಾ ಕಡತ
12. ಹೆಚ್ಚುವರಿ ಪ್ರತಿ